ಗ ನಕಯುಪ

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2290

ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್

ಉತ್ತರಿಸುವ ಸಚಿವರು : ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 26.03.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಸಾರಿಗೆ ಇಲಾಖೆಯಿಂದ ನಿರುದ್ಯೋಗಿ ಯುವಕ/ಯುವತಿಯರಿಗೆ(ಎಸ್‌ಸಿ/ ಎಸ್‌ಟಿ ಹೊರತುಪಡಿಸಿ) ಉಚಿತ ಲಘು ವಾಹನ ತರಬೇತಿ ನೀಡಲಾಗಿದೆಯೇ; (ಮಾಹಿತಿಯನ್ನು ನೀಡುವುದು)	ಮಾನ್ಯ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲಿ (ಎಸ್‌ಸಿ/ಎಸ್‌ಟಿ) ಸೇರಿದಂತೆ ಎಲ್ಲಾ ಯುವಕ/ಯುವತಿಯರಿಗೆ ರಾಜ್ಯದ ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿ ಉಚಿತ ಲಘು ವಾಹನ ತರಬೇತಿ ನೀಡಲಾಗುತ್ತಿದೆ
ಆ)	ಲಘುವಾಹನ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸುವುದು ಯಾವಾಗ;	ಕರ್ನಾಟಕ ಕೌಶಲ್ಯಾಭಿವೃಧಿ ನಿಗಮದ ವೆಬ್‌ಸೈಟ್ www.kaushalkar.comನಲ್ಲಿ ವರ್ಷವಿಡಿ ಆನ್‌ಲೈನ್ ಮೂಲಕ ಅರ್ಹ ಯುವಕ/ ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ
ಇ)	ಬಿಬಿಎಂಪಿ ಹಾಗೂ ಇತರೆ ಮಹಾನಗರ ಪಾಲಿಕೆಗಳಿಂದಲೂ ವಾಹನ ತರಬೇತಿಯನ್ನು ನೀಡಲಾಗುತ್ತದೆಯೇ; ಇದ್ದಲ್ಲಿ, ಅದರ ಬಗ್ಗೆ ಮಾಹಿತಿ ನೀಡವುದು;	ಹೌದು. **ಬಿ.ಬಿ.ಎಂ.ಪಿ.** ಕಲ್ಯಾಣ ಕಾರ್ಯಕ್ರಮಗಳಡಿ ವಾಹನ ಚಾಲನಾ ತರಬೇತಿ (ತ್ರಿಚಕ್ರ ಮತ್ತು ಲಘು ಮೋಟಾರು ವಾಹನ) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ವಲಯ ಮಟ್ಟದಲ್ಲಿ ಅನುಷ್ಠಾನಗೊಳಿಲಾಗುತ್ತಿರುತ್ತದೆ. **ಮಹಾನಗರ ಪಾಲಿಕೆಗಳಿಂದ** ವಾಹನ ತರಬೇತಿ ನೀಡಲಾಗಿರುವ ವಿವರ ಕೆಳಕಂಡಂತಿದೆ: **ವಿಜಯಪುರ ಮಹಾನಗರ ಪಾಲಿಕೆ:** 429 ಫಲಾನುಭವಿಗಳಿಗೆ ತರಬೇತಿ ನೀಡಲಾಗಿದೆ **ದಾವಣಗೆರ ಮಹಾನಗರ ಪಾಲಿಕೆ:** ಕೇಂದ್ರ ಪುರಸ್ಕೃತ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯಡಿ (ಡೇ-ನಲ್ಮ್) ಕೌಶಲ್ಯ

		ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಘಟಕದಡಿ ಲಘುವಾಹನ ತರಬೇತಿಯನ್ನು ದಾವಣಗೆರೆ ಮಹಾನಗರ ಪಾಲಿಕೆ ವತಿಯಿಂದ 2014-15ನೇ ಸಾಲಿನಲ್ಲಿ 325, 2015-16ನೇ ಸಾಲಿನಲ್ಲಿ 175ಮತ್ತು 2016-17ನೇ ಸಾಲಿನಲ್ಲಿ 436, ಒಟ್ಟು 936 ಅರ್ಹ ಫಲಾನುಭವಿಗಳಿಗೆ ತರಬೇತಿಯನ್ನು ನೀಡಲಾಗಿದೆ. **ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ:** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಡೇ-ನಲ್ಮ್ ಯೋಜನೆ ವತಿಯಿಂದ ಎಸ್.ಸಿ. ಮತ್ತು ಎಸ್.ಟಿ. ಸಮುದಾಯಕ್ಕೆ ಸೇರಿದ ಫಲಾನುಭವಿಗಳಲ್ಲದೆ ಬೇರೆ ಸಮುದಾಯದವರಿಗೂ ಕೂಡ ಮಹಾನಗರ ಪಾಲಿಕೆ ವತಿಯಿಂದ 2015-16ನೇ ಸಾಲಿನಲ್ಲಿ 261 ಮತ್ತು 2016-17ನೇ ಸಾಲಿನಲ್ಲಿ 218, ಒಟ್ಟು 479 ಲಘು ಮೋಟಾರ್ ವಾಹನ ತರಬೇತಿ ನೀಡಲಾಗಿರುತ್ತದೆ. **ತುಮಕೂರು ಮಹಾನಗರ ಪಾಲಿಕೆ:** ಡೇ-ನಲ್ಮ್ ಯೋಜನೆಯು ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಯಾಗಿದ್ದು, ಯೋಜನೆಯ ಉಪ ಘಟಕವಾಗದ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪ ಘಟಕದಡಿ ಸರ್ಕಾರದ ಮಾರ್ಗಸೂಚಿಯನ್ವಯ ಲಘು ವಾಹನ ಚಾಲನಾ ತರಬೇತಿಯನ್ನು ಸರ್ಕಾರವು ಆಯಾ ವರ್ಷಗಳಿಗನುಗುಣವಾಗಿ ನಿಗಧಿಪಡಿಸುವ ಗುರಿಗಳಿಗೆ ಎದುರಾಗಿ ಲಘು ವಾಹನಾ ಚಾಲನಾ ತರಬೇತಿಯನ್ನು ಪಾಲಿಕೆಯ ವತಿಯಿಂದ 2014-15ನೇ ಸಾಲಿನಲ್ಲಿ 271, 2015-16ನೇ ಸಾಲಿನಲ್ಲಿ 97, 201617ನೇ ಸಾಲಿನಲ್ಲಿ 150 ಮತ್ತು 2017-18 ಸಾಲಿನಲ್ಲಿ 73, ಒಟ್ಟು 591 ಲಘು ಮೋಟಾರ್ ವಾಹನ ತರಬೇತಿ ನೀಡಲಾಗಿರುತ್ತದೆ. **ಮೈಸೂರು ಮಹಾನಗರ ಪಾಲಿಕೆ:** ಮೈಸೂರು ಮಹಾನಗರ ಪಾಲಿಕೆ ಡೇ-ನಲ್ಮ್ ಯೋಜನೆಯಡಿ 2015-16ನೇ ಸಾಲಿನಲ್ಲಿ 150, 2016-17ನೇ ಸಾಲಿನಲ್ಲಿ 200 ಮತ್ತು 2017-18ನೇ ಸಾಲಿನಲ್ಲಿ

		126 ಮಂದಿಗೆ ಎಲ್.ಎಂ.ವಿ. ತರಬೇತಿ ನೀಡಲು ಗುರಿ ನಿಗಧಿಪಡಿಸಲಾಗಿದ್ದು, ಪ್ರಸ್ತುತ 361 ಮಂದಿ ತರಬೇತಿ ಕಾರ್ಯ ಮುಗಿದಿದ್ದು, ಉಳಿಕೆ 115 ಮಂದಿ ತರಬೇತಿ ಚಟುವಡಿಕೆ ಪ್ರಗತಿಯಲ್ಲಿರುತ್ತದೆ.
ಈ)	ಉಚಿತ ಲಘುವಾಹನ ತರಬೇತಿಯನ್ನು ಪಡೆಯಲು ಬೇಕಾದ ಅರ್ಹತೆಗಳೇನು; ಹಾಗೂ ತರಬೇತಿ ಅವಧಿಯಲ್ಲಿ ಸಿಗುವ ಸೌಲಭ್ಯಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	**ಬಿ.ಬಿ.ಎಂ.ಪಿ.** ಕಲ್ಯಾಣ ಕಾರ್ಯಕ್ರಮಗಳಡಿ ವಾಹನ ಚಾಲನಾ ತರಬೇತಿ ಪಡೆಯುವ ಕುರಿತು ಹೊರಡಿಸಿರುವ ಮಾರ್ಗಸೂಚಿಗಳನ್ನು **<u>ಅನುಬಂಧದಲ್ಲಿ</u>** ನೀಡಲಾಗಿದೆ. **ಮಹಾನಗರ ಪಾಲಿಕೆಗಳಿಂದ** ನೀಡಲಾಗುತ್ತಿರುವ ಡೇ-ನಲ್ಮ್ ಅಭಿಯಾನದಡಿ ತರಬೇತಿಯನ್ನು ಪಡೆಯಲು ಈ ಕೆಳಕಂಡಂತೆ ಅರ್ಹತೆಯನ್ನು ಹೊಂದಿರಬೇಕು: • ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. • ನಗರದ ಬಡವರಾಗಿರಬೇಕು/ಬಿಪಿಎಲ್ ಕಾರ್ಡ್ ಹೊಂದಿರಬೇಕು. • ವಾರ್ಷಿಕ ಆದಾಯ ರೂ.1,20,000/-ಕ್ಕಿಂತ ಕಡಿಮೆ ಆದಾಯವನ್ನು ಹೊಂದಿರಬೇಕು. ಸದರಿ ತರಬೇತಿಯನ್ನು ಉಚಿತವಾಗಿ ನೀಡಲಾಗುವುದು. ತರಬೇತಿಯ ಅವಧಿಯಲ್ಲಿ ಕಲಿಕಾ ಸಾಮಾಗ್ರಿ ಮತ್ತು ತರಬೇತಿಯನ್ನು ಪೂರ್ಣಗೊಳಿಸುವ ಫಲಾನುಭವಿಗಳಿಗೆ ಪ್ರಮಾಣಿಕರಣ ಮತ್ತು ಮೌಲ್ಯಮಾಪನವನ್ನು ಮಾಡಿಸಿ ಪ್ರಮಾಣ ಪತ್ರವನ್ನು ವಿತರಿಸಲಾಗುವುದು. **ಸಾರಿಗೆ ಸಂಸ್ಥೆಗಳಿಂದ** ನೀಡುವ ತರಬೇತಿಯನ್ನು ಪಡೆಯಲು ಅಗತ್ಯವಿರುವ ಅರ್ಹತೆಗಳು ಈ ಕೆಳಕಂಡಂತಿವೆ:- • ಜನ್ಮ ದಿನಾಂಕದ ದೃಢೀಕರಣ ಪತ್ರ. • ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ 18 ವರ್ಷ ಆಗಿರಬೇಕು ಹಾಗೂ ಗರಿಷ್ಠ 35 ಮೀರಿರಬಾರದು. • ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ ಹಾಗೂ

		ಆಧಾರ್ ಕಾರ್ಡ್ ಹೊಂದಿರಬೇಕು. • ಪಾಸ್‌ಪೋರ್ಟ್ ಅಳತೆಯ ಫೋಟೋ. • ವಿಳಾಸ, ಗುರುತು, ಹುಟ್ಟಿದ ದಿನಾಂಕದ ದೃಢೀಕರಣ ದಾಖಲೆ. ತರಬೇತಿ ಅವಧಿಯಲ್ಲಿ ಸಿಗುವ ಸೌಲಭ್ಯಗಳ ಮಾಹಿತಿ ಈ ಕೆಳಕಂಡಂತಿದೆ: • ವಸತಿಸಹಿತ ತರಬೇತಿ ಅವಧಿಯಲ್ಲಿ ಬೆಳಗಿನ ಉಪಹಾರ, ಕಾಫಿ/ಟೀ, ಮಧ್ಯಾಹ್ನದ ಊಟ, ರಾತ್ರಿ ಊಟದೊಂದಿಗೆ ಸುಸಜ್ಜಿತ ಶೌಚಾಲಯದ ವ್ಯವಸ್ಥೆ ಹೊಂದಿರುವ ವಸತಿ ಸೌಲಭ್ಯಗಳನ್ನು ನೀಡಲಾಗುತ್ತಿದೆ. • ವಸತಿರಹಿತ ತರಬೇತಿ ಅವಧಿಯಲ್ಲಿ ವಸತಿಯನ್ನು ಹೊರತುಪಡಿಸಿ ಮೇಲ್ಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಸಂಖ್ಯೆ: ಟಿಡಿ 167 ಟಿಸಿಕ್ಯೂ 2021

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು